ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೬

# ಕರ್ನಾಟಕ ವಿಧಾನ ಪರಿಷತ್ತು

**ನೂರ ಇಪ್ಪತ್ತೈದನೆಯ ಅಧಿವೇಶನ**

**ಮಂಗಳವಾರ, ದಿನಾಂಕ: ೧೫ನೇ ಜುಲೈ, ೨೦೧೪**

---

**ಸಮೂಹ – II**

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

## ೧೧೦ ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಕಾಮಗಾರಿ

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪೧ (೧೩೪೬) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ 'ಜಡೆ' ಗ್ರಾಮಕ್ಕೆ ೧೧೦ ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ಮಂಜೂರಾಗಿದ್ದು ಯಾವಾಗ ; ನಿಗದಿಪಡಿಸಿದ ಮೊತ್ತವೆಷ್ಟು ;

(ಆ) ಸದರಿ ೧೧೦ ಕೆ.ವಿ. ವಿದ್ಯುತ್ ಸಬ್–ಸ್ಟೇಷನ್ ವಿದ್ಯುತ್ ಕಾಮಗಾರಿಗಾಗಿ ಇದುವರೆವಿಗೂ ಎಷ್ಟು ಬಾರಿ ಟೆಂಡರ್ ಕರೆಯಲಾಗಿದೆ ; ಈಗಿನ ಟೆಂಡರ್ ಮೊತ್ತ ಎಷ್ಟು ;

(ಇ) ಕಾಮಗಾರಿಯು ಇದುವರೆವಿಗೂ ಪ್ರಾರಂಭವಾಗದಿರಲು ಕಾರಣವೇನು ;

(ಈ) ಕಾಮಗಾರಿಯ ವಿಳಂಬದಿಂದ ಸ್ಥಳೀಯ ಸಾರ್ವಜನಿಕರು ವಿದ್ಯುತ್ ಸಮಸ್ಯೆ ಎದುರಿಸುತ್ತಿರುವುದು ಮತ್ತು ವಿಳಂಬದಿಂದಾಗಿ ಸರ್ಕಾರಕ್ಕೆ ಆರ್ಥಿಕ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ?

## ಮಹಿಕೋ ಕಂಪನಿಯ ಕನಕ/ನಿಕ್ಕಿ ಪ್ಲಸ್ ಹತ್ತಿ ಬಿತ್ತನೆ ಬೀಜ

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೨೪೨ (೧೩೮೮) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮಹಿಕೋ ಕಂಪನಿಯ (ಬಿ.ಟಿ.) ಕನಕ ಹಾಗೂ ನಿಕ್ಕಿ ಪ್ಲಸ್ ಹತ್ತಿ ಬೀಜವನ್ನು ಬಿತ್ತನೆಗೆ ನಿಷೇಧಿಸಿದೆಯೇ ;

(ಆ) ಹಾವೇರಿ ಜಿಲ್ಲೆಯಲ್ಲಿ ಮಹಿಕೋ ಬೀಜ ಮಾರಾಟಗಾರರು ರೈತರಿಂದ ಒಪ್ಪಿಗೆ ಪತ್ರ ಬರೆಸಿಕೊಂಡು ಬೀಜ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದರೆ, ಹತ್ತಿ ಬೀಜ ಮಾರಾಟಗಾರರ ಮೇಲೆ ಏನು ಕ್ರಮ ಕೈಗೊಂಡಿದೆ ?

## ಲೋಕೋಪಯೋಗಿ ಪ್ರಗತಿ ಯೋಜನೆಗಳು

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪೩ (೧೩೨೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾಂ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ಪ್ರಗತಿಯಲ್ಲಿರುವ ಯೋಜನೆಗಳಾವುವು ; ಅವುಗಳಿಗೆ ಮೀಸಲಿಟ್ಟ ಹಣವೆಷ್ಟು ; (ತಾಲ್ಲೂಕುವಾರು, ಯೋಜನಾವಾರು ವಿವರ ನೀಡುವುದು)

(ಆ) ಜಿಲ್ಲೆಯಲ್ಲಿ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳಾವುವು ; ಅವುಗಳ ರೂಪುರೇಷೆಗಳೇನು ; (ಯೋಜನಾವಾರು ವಿವರ ಒದಗಿಸುವುದು)

(ಇ) ಇಲಾಖೆಗೆ ಜಿಲ್ಲೆಯಲ್ಲಿ ಹೊಸ ಬೇಡಿಕೆಗಳೇನಾದರೂ ಬಂದಿದ್ದಲ್ಲಿ ತೆಗೆದುಕೊಂಡಿರುವ ಕ್ರಮಗಳೇನು ?

## ನಿರಂತರ ವಿದ್ಯುತ್ ಸರಬರಾಜು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪೪ (೧೩೭೦) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಜಿಲ್ಲೆಯಲ್ಲಿ "ನಿರಂತರ ಜ್ಯೋತಿ" ಯೋಜನೆಯಲ್ಲಿ ಎಷ್ಟು ಕಡೆ ೨೪ ಗಂಟೆ ವಿದ್ಯುತ್ ಪೂರೈಸಲಾಗುತ್ತಿದೆ ; ಎಲ್ಲೆಲ್ಲಿ ;

(ಆ) ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ ಆಡುತ್ತಿರುವುದರಿಂದ ಆ ಪ್ರದೇಶಗಳಿಗೆ ೨೪ ಗಂಟೆ ವಿದ್ಯುತ್ ಪೂರೈಸಲು ಏನಾದರೂ ಕ್ರಮ ಕೈಗೊಳ್ಳಲಿದೆಯೇ ;

(ಇ) ನಿರಂತರ ಜ್ಯೋತಿ ಮತ್ತು ಬೇರೆ ಯೋಜನೆ ಅನ್ವಯ ನಿರಂತರ ವಿದ್ಯುತ್ ಪೂರೈಸಲು ಏನಾದರೂ ಕಾಮಗಾರಿ ಕೈಗೊಳ್ಳಲಾಗುವುದೇ ; ಅವು ಎಲ್ಲೆಲ್ಲಿ ? (ವಿವರ ನೀಡುವುದು)

## ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸೌಲಭ್ಯ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪೫ (೧೩೭೭) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗುಲ್ಬರ್ಗಾ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ಎಷ್ಟು ರೈತರ ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಒದಗಿಸಲಾಗಿದೆ ;

(ಆ) ಪ್ರತಿವರ್ಷ ವಿದ್ಯುತ್ ವಿತರಣಾ ಕಂಪನಿಗಳಿಗೆ ಸರ್ಕಾರ ನೀಡಬೇಕಾದ ಹಣವೆಷ್ಟು ;

(ಇ) ಸರ್ಕಾರ ಈ ಹಣವನ್ನು ವಿದ್ಯುತ್ ವಿತರಣಾ ಕಂಪನಿಗಳಿಗೆ ಬಿಡುಗಡೆ ಮಾಡಿದೆಯೇ ;

(ಈ) ಐ.ಪಿ. ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವುದನ್ನು ಸರ್ಕಾರ ನಿಲ್ಲಿಸಲು ಆಲೋಚಿಸಿದೆಯೇ ?

## ಗೃಹ ನಿರ್ಮಾಣ ಸಹಕಾರ ಸಂಘಗಳ

## ಕಾನೂನು ಬಾಹಿರ ಆಪಾದನೆಗಳು

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೨೪೬ (೧೩೫೩) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಗೃಹ ನಿರ್ಮಾಣ ಸಹಕಾರ ಸಂಘ/ಸೊಸೈಟಿಗಳಿವೆ ; (ಪೂರ್ಣ ವಿವರ ಒದಗಿಸುವುದು)

(ಆ) ಅವುಗಳಲ್ಲಿ ಎಷ್ಟು ಸಂಘ/ಸೊಸೈಟಿಗಳ ವಿರುದ್ಧ ಕಾನೂನು ಬಾಹಿರ ಕೇಸು/ಆಪಾದನೆಗಳಿವೆ ;

(ಇ) ಅಂತಹ ಸಂಘ/ಸೊಸೈಟಿಗಳ ವಿರುದ್ಧ ಇರುವ ಕೇಸು/ಆಪಾದನೆಗಳ ಪೂರ್ಣ ವಿವರ ಒದಗಿಸುವುದು ; ಸರ್ಕಾರ ಈ ನಿಟ್ಟಿನಲ್ಲಿ ತೆಗೆದುಕೊಂಡಿರುವ ಕ್ರಮಗಳೇನು ?

## ಕೃಷಿ ಯಂತ್ರೋಪಕರಣಗಳ ಸಬ್ಸಿಡಿ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) –**

೨೪೭ (೧೪೨೫) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ರೈತರ ಕೃಷಿಗೆ ಅಗತ್ಯವಾಗಿರುವ ಕೃಷಿ ಯಂತ್ರ ಹಾಗೂ ಉಪಕರಣಗಳು ಯಾವುವು ; (ವಿವರಗಳೊಡನೆ)

(ಆ) ಇಲಾಖಾ ವತಿಯಿಂದ ರೈತರಿಗೆ ಸಬ್ಸಿಡಿ ದರದಲ್ಲಿ ಸದರಿ ಯಂತ್ರ ಹಾಗೂ ಉಪಕರಣಗಳನ್ನು ವಿತರಣೆ ಮಾಡಲಾಗುತ್ತಿದೆಯೇ ; ವಿತರಣೆಗೆ ಅನುಸರಿಸಲಾಗುತ್ತಿರುವ ಮಾನದಂಡಗಳೇನು ; (ವಿವರಗಳೊಡನೆ)

(ಇ) ಯಾವ ಯಾವ ಯಂತ್ರ ಹಾಗೂ ಕೃಷಿ ಉಪಕರಣಗಳಿಗೆ ಯಾವ ರೂಪದ ಸಬ್ಸಿಡಿ ದರಗಳನ್ನು ನಿಗದಿಪಡಿಸಲಾಗಿದೆ ; ಸದರಿ ದರಗಳು ಎಂದಿನಿಂದ ಜಾರಿಯಲ್ಲಿವೆ ; (ವಿವರಗಳೊಡನೆ)

(ಈ) ಸದರಿ ಸಬ್ಸಿಡಿ ದರಗಳನ್ನು ಸರ್ಕಾರ ಆಗಿಂದಾಗ್ಗೆ ಪರಿಷ್ಕರಣೆ ಮಾಡುತ್ತಿದೆಯೇ ; ಪರಿಷ್ಕರಣೆಗೆ ಅನುಸರಿಸುತ್ತಿರುವ ಮಾನದಂಡಗಳೇನು ;

(ಉ) ಕಳೆದ ಮೂರು ವರ್ಷಗಳಿಂದ ಯಂತ್ರ ಹಾಗೂ ಉಪಕರಣಗಳ ಖರೀದಿಗೆ ಇಲಾಖೆಯಿಂದ ನೀಡಲಾಗಿರುವ ಸಬ್ಸಿಡಿ ಮೊತ್ತವೆಷ್ಟು ? (ವಿವರಗಳೊಡನೆ)

## ಲೋಕೋಪಯೋಗಿ ಕಾಮಗಾರಿಗಳ ಪ್ರಗತಿ

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೪೮ (೧೩೫೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷದಿಂದ ಇಲ್ಲಿಯವರೆಗೆ ಲೋಕೋಪಯೋಗಿ ಇಲಾಖೆ ವತಿಯಿಂದ ಕಾರವಾರ ಜಿಲ್ಲೆಯಲ್ಲಿ ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಬಿಡುಗಡೆಯಾದ ಹಣವೆಷ್ಟು ; (ವರ್ಷವಾರು ಮತ್ತು ಶೀರ್ಷಿಕೆವಾರು ವಿವರ ನೀಡುವುದು)

(ಆ) ಈ ಜಿಲ್ಲೆಗೆ ಬಿಡುಗಡೆಯಾದ ಅನುದಾನವನ್ನು ಯಾವ ಯಾವ ಕಾಮಗಾರಿಗೆ ವೆಚ್ಚ ಮಾಡಲಾಗಿದೆ ; (ಕಾಮಗಾರಿವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಜಿಲ್ಲೆಯಲ್ಲಿ ಕಳೆದ ೫ ವರ್ಷಗಳ ಅವಧಿಯಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ಕಾಮಗಾರಿಗಳು ಮುಗಿದ ಬಗ್ಗೆ ಪಾವತಿಸಲಾದ ಬಿಲ್‌ಗಳ ಒಟ್ಟು ಮೊತ್ತವೆಷ್ಟು ? (ವಿವರ ನೀಡುವುದು)

## ಕೃಷಿ ವಿಕಾಸ ಯೋಜನೆ

**ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು) –**

೨೪೯ (೧೩೫೯) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ರೈತರಿಗೆ ಅಧಿಕ ಲಾಭ ಹಾಗೂ ಗ್ರಾಹಕರಿಗೆ ಗುಣಮಟ್ಟದ ಹಣ್ಣು–ತರಕಾರಿಗಳನ್ನು ಮನೆ ಬಾಗಿಲಿಗೆ ತಲುಪಿಸಲು "ಆಧುನಿಕ ತರಕಾರಿ ವ್ಯಾನ್" ಗಳನ್ನು ಪ್ರಾಯೋಗಿಕವಾಗಿ ಸಂಚಾರಕ್ಕೆ ಬಿಡುವ ವಿಚಾರವು ಸರ್ಕಾರದ ಮುಂದಿದೆಯೇ ;

(ಆ) ಈಗಾಗಲೇ ಎಲ್ಲೆಲ್ಲಿ ಯೋಜನೆ ಅನುಷ್ಠಾನಕ್ಕಾಗಿ ಸ್ಥಳ ಗುರುತಿಸಲಾಗಿದೆ ; ಹಾಲಿ ಬಿಟ್ಟಿರುವ ವಾಹನಗಳು ಎಷ್ಟು ಮತ್ತು ಎಲ್ಲೆಲ್ಲಿ ; ಇದರ ಉದ್ದೇಶಗಳೇನು ; ಇದನ್ನು ನಿರ್ವಹಣೆ ಮಾಡಲು ತಂಡ ರಚಿಸಲಾಗುವುದೇ ; (ವಿವರಗಳೊಂದಿಗೆ)

(ಇ) ಇದರಿಂದಾಗಿ ರೈತರ ಹಾಗೂ ಗ್ರಾಹಕರ ನಡುವಿನ ದಲ್ಲಾಳಿ–ಮಧ್ಯವರ್ತಿಗಳ ಹಾವಳಿ ತಪ್ಪಿಸಿದಂತಾಗುತ್ತದೆಂದು ಸರ್ಕಾರ ಭಾವಿಸುವುದೇ ;

(ಈ) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಹಮ್ಮಿಕೊಂಡಿರುವ ಈ ಕಾರ್ಯಕ್ಕೆ ಸರ್ಕಾರ ನೀಡಿರುವ ಅನುದಾನ ಎಷ್ಟು ; ಹೀಗಾಗಿ ನೇರವಾಗಿ ರೈತರಿಗೆ ಸಿಗುವ ಲಾಭವೆಷ್ಟು ;

(ಉ) ಸದರಿ ವಾಹನಗಳು ನೂತನ ತಂತ್ರಜ್ಞಾನ ಆವಿಷ್ಕಾರಗಳನ್ನು ಒಳಗೊಂಡಿರುತ್ತದೆಯೇ ; ಇದನ್ನು ರಾಜ್ಯದ ಇತರೆಡೆ ವಿಸ್ತರಿಸಲು ಯಾವ ಕ್ರಮ ಕೈಗೊಂಡಿದೆ ? (ವಿವರಗಳನ್ನು ಒದಗಿಸುವುದು)

## ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ಮತ್ತು ಸಿಬ್ಬಂದಿ ಕೊರತೆ ಬಗ್ಗೆ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫೦ (೧೩೨೪) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯ ಪ್ರತಿ ದಿನದ ವಿದ್ಯುತ್ ಬೇಡಿಕೆ ಎಷ್ಟು ;

(ಆ) ಈ ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆಯೆ ; ಇಲ್ಲವಾದಲ್ಲಿ, ವಿದ್ಯುತ್ ಬೇಡಿಕೆ ಮತ್ತು ಲಭ್ಯತೆ ನಡುವೆ ಇರುವ ಅಂತರವನ್ನು ಕಡಿಮೆ ಮಾಡುವ ದಿಸೆಯಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಜಿಲ್ಲೆಯಲ್ಲಿ ಮಂಜೂರಾದ ಲೈನ್ ಮ್ಯಾನ್ (ನಿರ್ವಹಣಾ ಸಿಬ್ಬಂದಿ) ಹುದ್ದೆಗಳೆಷ್ಟು ; (ಉಪ ವಿಭಾಗವಾರು ವಿವರ ನೀಡುವುದು)

(ಈ) ಖಾಲಿಯಿರುವ ಲೈನ್ ಮ್ಯಾನ್ ಹುದ್ದೆಗಳನ್ನು ಭರ್ತಿ ಮಾಡಲು ಜಿಲ್ಲೆಯವರನ್ನೇ ಆಯ್ಕೆ ಮಾಡಬಾರದೇಕೆ ? (ವಿವರ ನೀಡುವುದು)

## ವಕ್ಫ್ ಆಸ್ತಿಗಳ ಅಭಿವೃದ್ಧಿ

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮ ನಿರ್ದೇಶನ ಹೊಂದಿದವರು) –**

೨೫೧ (೧೩೧೫) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಕ್ಫ್ ಆಸ್ತಿಗಳ ಅಭಿವೃದ್ಧಿಗೋಸ್ಕರ ಕರ್ನಾಟಕ ವಕ್ಫ್ ಕೌನ್ಸಿಲ್ ವತಿಯಿಂದ ಪಡೆದ ಸಾಲ ಎಷ್ಟು ; ರಾಜ್ಯದ ಎಲ್ಲಾ ವಕ್ಫ್ ಸಂಸ್ಥೆಗಳು ಪಡೆದ ಸಾಲದ ವಿವರ ಒದಗಿಸುವುದು ;

(ಆ) ಈ ರೀತಿ ಪಡೆದ ಸಾಲದ ಮೇಲೆ ವಿಧಿಸಿರುವ ವೆಲ್‌ಫೇರ್ ಸೆಸ್ ಹಣವೆಷ್ಟು ; (ರಾಜ್ಯದ ಎಲ್ಲಾ ವಕ್ಫ್ ಸಂಸ್ಥೆಗಳು ಬಾಕಿ ಉಳಿಸಿಕೊಂಡಿರುವ ವೆಲ್‌ಫೇರ್ ಸೆಸ್‌ನ ವಿವರವಾದ ವರದಿ ನೀಡುವುದು)

(ಇ) ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಪಡೆದ ಸಾಲ ಮನ್ನಾ ಮಾಡಿದಂತೆ, ಕರ್ನಾಟಕ ವಕ್ಫ್ ಕೌನ್ಸಿಲ್‌ನಿಂದ ಪಡೆದ ಸಾಲದ ಮೇಲಿನ ವೆಲ್‌ಫೇರ್ ಸೆಸ್ ಮನ್ನಾ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ ?

## ಸ್ಥಳೀಯ ಸಂಸ್ಥೆಗಳ ಸದಸ್ಯರ ಗೌರವಧನದ ಹೆಚ್ಚಳ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೫೨ (೧೩೩೮) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸ್ಥಳೀಯಾಡಳಿತ ಸಂಸ್ಥೆಗಳಾದ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಸದಸ್ಯರಿಗೆ ಗೌರವಧನ/ಸಭೆಯ ಹಾಜರಿ ಭತ್ಯೆ ಯಾವ ಮಾದರಿಯಲ್ಲಿ ನೀಡಲಾಗುತ್ತಿದೆ ; (ಪ್ರತಿ ಪೌರಾಡಳಿತ, ಸ್ಥಳೀಯ ಪಂಚಾಯತ್ ಸಂಸ್ಥೆಯ ಸದಸ್ಯರಿಗೆ ನೀಡುವ ಪೂರ್ಣ ಮಾಹಿತಿ ನೀಡುವುದು)

(ಆ) ಪಂಚಾಯತ್ ರಾಜ್ ವ್ಯವಸ್ಥೆಯ ಪ್ರತಿನಿಧಿಗಳಿಗೆ ನೀಡುವಂತೆ ಗೌರವಧನದ/ ಸಭೆಯ ಹಾಜರಿ ಭತ್ಯೆ ದುಪ್ಪಟ್ಟು ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು ? (ವಿವರವಾದ ಮಾಹಿತಿ ನೀಡುವುದು)

## ಜಲವಿದ್ಯುತ್ ಪರ್ಯಾಯವಾಗಿ ವಿದ್ಯುಚ್ಛಕ್ತಿ ಉತ್ಪಾದನೆ

**ಶ್ರೀ ವಿ. ಸೋಮಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೨೫೩ (೧೩೮೭) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಜಲ ವಿದ್ಯುತ್ ಶಕ್ತಿಯನ್ನು ಹೊರತುಪಡಿಸಿ, ಬೇರೆ ಯಾವ ರೀತಿಯ ವಿದ್ಯುತ್ ಉತ್ಪಾದಿಸಲಾಗುತ್ತದೆ ; ಯಾವ ಯಾವ ಜಿಲ್ಲೆಗಳಲ್ಲಿ ಪರ್ಯಾಯವಾಗಿ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ, ಸ್ಥಾಪಿಸಲಾಗಿದೆ ;

(ಆ) ರಾಜ್ಯದಲ್ಲಿ ಒಟ್ಟು ಎಷ್ಟು ಪ್ರಮಾಣದಲ್ಲಿ ಸೌರಶಕ್ತಿಯನ್ನು ಸಮರ್ಪಕವಾಗಿ ಬಳಸಲಾಗುತ್ತಿದೆ ; ಇದರಿಂದ ಎಷ್ಟು ಪ್ರಮಾಣದ ವಿದ್ಯುಚ್ಛಕ್ತಿಯ ಬಳಕೆಯಾಗುತ್ತಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಮೋಡ ಕವಿದ ವಾತಾವರಣವಿರುವ ಕಡೆ ಸೌರಶಕ್ತಿಯೂ ಇಲ್ಲದೇ, ವಿದ್ಯುತ್ ಶಕ್ತಿಯೂ ಇಲ್ಲದೆ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಲ್ಲಿ, ಏನು ಕ್ರಮ ಕೈಗೊಳ್ಳಲಾಗಿದೆ ? (ವಿವರಿಸುವುದು)

**ಸಹಕಾರ ಹಾಗೂ ಸೌಹಾರ್ದ ಸಂಘಗಳ ವ್ಯಾಜ್ಯಗಳು**

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) –**

೨೫೪ (೧೬೯೦) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಲ್ಲಿ ರಾಜ್ಯದ ಸಹಕಾರ ಸಂಘಗಳ ಹಾಗೂ ಸೌಹಾರ್ದ ಸಹಕಾರಿಗಳ ಎಷ್ಟು ವ್ಯಾಜ್ಯಗಳು ದಾಖಲಾಗಿವೆ ;

(ಆ) ಕಳೆದ ೫ ವರ್ಷಗಳಲ್ಲಿ ಈ ವ್ಯಾಜ್ಯಗಳಿಂದ ಸರ್ಕಾರಕ್ಕೆ ಸಂದಾಯವಾಗಿರುವ ಶುಲ್ಕ ಎಷ್ಟು ;

(ಇ) ವ್ಯಾಜ್ಯ ಇತ್ಯರ್ಥಕ್ಕೆ ಸರ್ಕಾರಕ್ಕೆ ತಗಲಿರುವ ವೆಚ್ಚ ಎಷ್ಟು ;

(ಈ) ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ವ್ಯಾಜ್ಯ ಇತ್ಯರ್ಥ ಪ್ರಕ್ರಿಯೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಈ ಪ್ರಕ್ರಿಯೆ ಮುಗಿಸಲು/ಚುರುಕುಗೊಳಿಸಲು ಪ್ರತ್ಯೇಕ ಸಹಕಾರ ನ್ಯಾಯಾಲಯ ಸ್ಥಾಪನೆಯ ಯೋಜನೆ ಸರ್ಕಾರದ ಮುಂದಿದೆಯೇ ;

(ಊ) ಸೌಹಾರ್ದ ಸಹಕಾರ ಕಾಯ್ದೆ ಜಾರಿಗೆ ಬಂದಾಗಿನಿಂದ ಇದುವರೆಗೆ ಸಹಕಾರ ಸಂಘಗಳ ಕಾಯ್ದೆಯಿಂದ ಸೌಹಾರ್ದ ಕಾಯ್ದೆಗೆ ಪರಿವರ್ತಿತವಾಗಿರುವ ಸಹಕಾರ ಸಂಘಗಳು ಎಷ್ಟು ;

(ಋ) ಇವುಗಳಲ್ಲಿ ಎಷ್ಟು ಸಹಕಾರ ಸಂಘಗಳು ಸೌಹಾರ್ದ ಕಾಯ್ದೆಯಿಂದ ಮತ್ತೆ ಸಹಕಾರ ಸಂಘಗಳ ಕಾಯ್ದೆಗೆ ಪರಿವರ್ತಿತವಾಗಿವೆ ;

(ಎ) ಅದಕ್ಕೆ ಕಾರಣಗಳೇನು ?

## ಪೌರಾಡಳಿತ ಸೇವೆಯಲ್ಲಿರುವ ನೌಕರರ ಮೇಲೆ

## ಭ್ರಷ್ಟಾಚಾರ ಆರೋಪ

**ಶ್ರೀ ಅಶ್ವತ್‌ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

***೨೫೫*** (೧೩೩೦) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೌರಾಡಳಿತ ಸೇವೆಯ ಎಷ್ಟು ಜನ ಅಧಿಕಾರಿ/ನೌಕರರ ಮೇಲೆ ಭ್ರಷ್ಟಾಚಾರ ಆರೋಪವಿದೆ ;

(ಆ) ನಾಗಮಂಗಲ ಪಟ್ಟಣ ಪಂಚಾಯಿತಿ ಹಾಲಿ ಮುಖ್ಯಾಧಿಕಾರಿಯು ತುರುವೇಕೆರೆ ಪಟ್ಟಣ ಪಂಚಾಯ್ತಿಯಲ್ಲಿ ಸಮುದಾಯ ಸಂಘಟನಾ ಅಧಿಕಾರಿಯಾಗಿದ್ದಾಗ ವಾಣಿಜ್ಯ ಮಳಿಗೆ ನಿರ್ಮಾಣದಲ್ಲಿ ಅಕ್ರಮವಾಗಿ ಮಂಜೂರಾತಿ ನೀಡಿ, ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ನಾಗಮಂಗಲ ಪಟ್ಟಣ ಪಂಚಾಯ್ತಿಯಲ್ಲಿ ಲೋಕಸಭಾ ಚುನಾವಣಾ ಸಂದರ್ಭದಲ್ಲಿ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಗುತ್ತಿಗೆದಾರರಿಗೆ ಅಕ್ರಮವಾಗಿ ಚೆಕ್ ನೀಡಿ ನಿಯಮ ಉಲ್ಲಂಘಿಸಿ ಬಾಕಿ ಪಾವತಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; ಹಾಗಿದ್ದಲ್ಲಿ, ಇವರ ಮೇಲೆ ಯಾವ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆ ?

ವಿ. ಶ್ರೀಶ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕಾ.ಸೂ. 355, ಪ್ರತಿಗಳು– 1500 – ಪಿ8